

ಮಕ್ಕಳ ಅತ್ಯಾಚಾರವೇ ಆಗಿರಲಿ, ಸ್ವಇಚ್ಛೆಯ ತೊಡಗಿಸಿಕೊಳ್ಳುವಿಕೆಯೇ ಇರಲಿ. ಪುಸಲಾಯಿಸುವಿಕೆಯೇ ಆಗಲಿ... ಇಂತಹ ಪರಿಸ್ಥಿತಿಗಳನ್ನು ಎದುರಿಸಲು ನಾವು ಮಕ್ಕಳನ್ನು ಸಜ್ಜುಗೊಳಿಸಬೇಕಿದೆ. ಈ ಪ್ರಯತ್ನಗಳು ಶಾಲೆ ಮತ್ತು ಮನೆ ಎರಡೂ ಕಡೆ ನಡೆಯಬೇಕು.

ಬೆಳಗಾವಿ8,169, ವಿಜಯಪುರ6, 229, ರಾಯಚೂರು4,100, ತುಮಕೂರು 4, 282, ಮೈಸೂರು4, 952, ಚಿತ್ರದುರ್ಗ3,448, ಬಾಗಲಕೋಟೆ 3,384, ಉಡುಪಿ 182.

'ಮಕ್ಕಳು ಇಂತಹ ಸಂದರ್ಭಗಳಿಗೆ ಒಡ್ಡಿಕೊಳ್ಳುವಂತಹ ವಾತಾವರಣ ಎಲ್ಲೆಡೆ ನಿರ್ಮಾಣವಾಗುತ್ತಿದೆ. ಆದರೆ ಅದನ್ನು ಎದುರಿಸಲು, ನಿರ್ವಹಿಸಲು ಪೋಷಕರು, ಶಿಕ್ಷಕರು ಹಾಗೂ ಮಕ್ಕಳ ಮನಸು ಇನ್ನೂ ಸಿದ್ಧಗೊಂಡಿಲ್ಲ. ಲೈಂಗಿಕ ಕೃತ್ಯಗಳಿಗೆ ಈಡಾಗದಂತೆ ತಮ್ಮನ್ನ ತಾವು ಕಾಪಾಡಿಕೊಳ್ಳುವುದು ಗೊತ್ತಿಲ್ಲ. ವಯೋಸಹಜ ಆಕರ್ಷಣೆಗಳಿಂದ ತಪ್ಪಿಸಿಕೊಳ್ಳಲು ಅಥವಾ ನಿರ್ವಹಿಸಿಕೊಳ್ಳಲು ಏನು ಮಾಡಬೇಕು ಎನ್ನುವುದು ತಿಳಿದಿಲ್ಲ. ಸುರಕ್ಷಿತ ಮಿಲನದ ಬಗ್ಗೆ ಯಾರೂ ಅವರೊಂದಿಗೆ ಮಾತನಾಡುತ್ತಿಲ್ಲ. ಈ ಎಲ್ಲ ಕಾರಣಗಳಿಂದ ಮಕ್ಕಳು ಇಂತಹ ಬಲೆಯಲ್ಲಿ ಸಿಲುಕುತ್ತಿರುವ ಪ್ರಕರಣಗಳು ಹೆಚ್ಚುತ್ತಿವೆ' ಎನ್ನುತ್ತಾರೆ ಮಕ್ಕಳ ಹಕ್ಕುಗಳ ಬಗ್ಗೆ ಸಾಕಷ್ಟು ಕೆಲಸ ಮಾಡಿರುವ ಕವಿತಾ ರತ್ನ.

### ಪೋಷಕರ ಅನಿವಾರ್ಯತೆ ಮಕ್ಕಳ ಅಸಹಾಯಕತೆ

ಅಮ್ಮಅಪ್ಪ ಇಬ್ಬರೂ ದುಡಿಯುವುದು ಅನಿವಾರ್ಯ ಎನ್ನುವಂತಹ ಕಾಲಘಟ್ಟದಲ್ಲಿದ್ದೇವೆ. ಮಕ್ಕಳಿಗೆ ಸಮಯ, ಕಾಳಜಿ ಕೊಡಲಾಗದೇ ಆ ನಷ್ಟ ತುಂಬಲು ಅವರಿಗೆ ಬೇಕಿರುವ, ಬೇಡದೇ ಇರುವ ಸೌಲಭ್ಯ, ಸವಲತ್ತುಗಳನ್ನೆಲ್ಲಾ ಬಾಚಿಕೊಡುವ ಪರಿಪಾಟ ಬೆಳೆಯುತ್ತಿದೆ. ಮಕ್ಕಳನ್ನು ಆಟೋಟ, ಸಾಂಸ್ಕೃತಿಕ ಚಟುವಟಿಕೆಗಳಿಂದ ದೂರ ಇಟ್ಟು ಅಂಕಗಳನ್ನು ಹೆಕ್ಕುವ ಮಶೀನುಗಳಾಗಿ ಮಾಡುತ್ತಿರುವ ಇಂದಿನ ಶಿಕ್ಷಣ ಪದ್ಧತಿಯೂ ಇದಕ್ಕೊಂದು ಕಾರಣ ಎನ್ನಬಹುದು. ಮಕ್ಕಳ ಕಾನೂನುಗಳ ಬಿಗಿ ಸಾಲದಾಗುತ್ತಿದೆ ಎನ್ನುವುದೂ ಹೌದು... ಮಕ್ಕಳ ದುರಂತಕ್ಕೆ ಸಾಲು ಸಾಲು ಕಾರಣಗಳು ಕಣ್ಣೆದುರಿಗೇ ಇವೆ. ಪರಿಹಾರಗಳಿಗೆ ಇಚ್ಛಾಶಕ್ತಿ ಸಾಲುತ್ತಿಲ್ಲ. ಸರ್ಕಾರದ ಮಟ್ಟದಲ್ಲಿ ಯೋಜನೆ ರೂಪಿಸುವ ಹಂತದಲ್ಲಿ ಗಂಭೀರ ಪ್ರಯತ್ನಗಳು ನಡೆಯುತ್ತಿಲ್ಲ ಎನ್ನುವುದು ವಾಸ್ತವ.

ಮುಂಜಾನೆಯಿಂದ ರಾತ್ರಿಯವರೆಗೂ ದುಡಿಯಲು ಹೋಗುವ ತಂದೆತಾಯಿಗಳಿಗೆ ಮನೆಯಲ್ಲಿ ಮಕ್ಕಳು ಹೇಗಿದ್ದಾರೆ, ಅವರೊಂದಿಗೆ ಏನು ನಡೆಯುತ್ತಿದೆ, ಯಾವ ರೀತಿಯ ಬದಲಾವಣೆಗೆ ಒಡ್ಡಿಕೊಳ್ಳುತ್ತಿದ್ದಾರೆ ಎನ್ನುವುದು ನೋಡಲೂ ಆಗುತ್ತಿಲ್ಲ. ಮನೆಯಲ್ಲಿನ ಕಂದಮ್ಮನ ಹೊಟ್ಟೆಯಲ್ಲಿ ಕೂಸು ಬೆಳೆಯುತ್ತಿದೆ ಎನ್ನುವ ಆಘಾತಕಾರಿ ಸಂಗತಿ ಪೋಷಕರಿಗೆ ಆರೆಂಟು ತಿಂಗಳ ಕಾಲ ಗೊತ್ತಾಗದೇ ಇರುವುದು ತೀವ್ರ ನಿರ್ಲಕ್ಷ್ಯದ ಪರಿ.

ಇನ್ನೂ ಕೆಲವರಿಗೆ ಮಕ್ಕಳನ್ನು ವಸತಿ ಶಾಲೆಗಳಲ್ಲಿ ಬಿಡುವುದೇ ಸುರಕ್ಷಿತ ಎನ್ನುವ ನೆಮ್ಮದಿಯಾದರೂ ಇತ್ತು. ಅನೇಕ ಪೋಷಕರು ತಂತಮ್ಮ ಶಕ್ತ್ಯಾನುಸಾರ ವಸತಿ ಶಾಲೆಗಳನ್ನು ಆಯ್ದುಕೊಂಡು ಮಕ್ಕಳನ್ನು ಅಲ್ಲಿಯೇ ಬೆಳೆಸುತ್ತಿರುವುದು ಈಗಿನ ಪ್ರವೃತ್ತಿ. ಅನುಕೂಲಸ್ಥರು ಲಕ್ಷಾಂತರ ಹಣ ಕೊಟ್ಟು ಸುಸಜ್ಜಿತ ವಸತಿ ಶಾಲೆಗಳನ್ನು ನೋಡಿದರೆ, ಇಲ್ಲದವರು ಉಚಿತ ಹಾಗೂ ಸರ್ಕಾರಿ ವಸತಿ ಶಾಲೆಗಳತ್ತ ದೌಡಾಯಿಸುತ್ತಾರೆ. ಇಂತಹ ಭದ್ರಕೋಟೆಗಳಲ್ಲಿಯೂ ಮಕ್ಕಳು ಸುರಕ್ಷಿತವಾಗಿಲ್ಲ. ಇಂಥದ್ದೊಂದು ಬಹುದೊಡ್ಡ ಅವಾಂತರವಾಗುವವರೆಗೆ ಅಲ್ಲಿನ ಸಿಬ್ಬಂದಿ ಮಕ್ಕಳನ್ನು ಗಮನಿಸುವುದಿಲ್ಲ, ನೋಡುವುದಿಲ್ಲ, ವಿಚಾರಿಸುವುದೂ ಇಲ್ಲ ಎನ್ನುವ ವಾಸ್ತವ ಮತ್ತೊಂದು ರೀತಿಯ ಆತಂಕಕ್ಕೆ ಈಡು ಮಾಡಿದೆ.

### ಸುರಕ್ಷಿತ ಮಿಲನ

ಲೈಂಗಿಕ ಶಿಕ್ಷಣದ ಬಗ್ಗೆ ನಮ್ಮಲ್ಲಿ ಭಯಂಕರ ತಪ್ಪು ಗ್ರಹಿಕೆಗಳಿವೆ. ಅನೇಕ ಪೋಷಕರಿಂದ ವಿರೋಧವೂ ಇದೆ. ಇದೆಲ್ಲದರ ಹೊರತಾಗಿಯೂ ಇದನ್ನು ಶಾಲಾ ಬಾಲಕ ಬಾಲಕಿಯರಿಗೆ ತಲುಪಿಸುವುದು ಹೇಗೆ?

ಈ ಎಲ್ಲ ಗಡಿಗಳನ್ನು ದಾಟಿ ಪ್ರಾಯೋಗಿಕವಾದ ಪರಿಹಾರಗಳನ್ನು ಕಂಡುಕೊಳ್ಳಲು ಮುಂದಾಗದಿದ್ದರೆ ನಮ್ಮ ಮುಂದಿನ ಪೀಳಿಗೆ ಸಂಕಷ್ಟಕ್ಕೆ ಬೀಳಲಿದೆ. ಈಗ ವಿಧಿ ಇಲ್ಲದೆ ಸುರಕ್ಷಿತ ಲೈಂಗಿಕತೆ ಬಗ್ಗೆ ಮಕ್ಕಳೊಂದಿಗೆ ಮಾತನಾಡಬೇಕಾದ ಜರೂರು ಇದೆ. ಈ ವಿಷಯ ಬಂದಾಗ ಪೋಷಕರು ಗಾಬರಿಗೆ ಬೀಳುತ್ತಾರೆ. 'ನಮ್ಮ ಮಗುವಿಗೆ ಏನೂ ಗೊತ್ತಿಲ್ಲ, ಇವರೇ ಎಲ್ಲಾ ಕಲಿಸಿಕೊಟ್ಟು ಬಿಡುತ್ತಾರೆ' ಎನ್ನುವ ದೂರುಗಳೂ ಸಾಮಾನ್ಯ. ಪೋಷಕರೂ ವಾಸ್ತವವನ್ನು ಅರಿಯಬೇಕು. ಸುರಕ್ಷಿತ ಮಿಲನದ ಬಗ್ಗೆ ಮಕ್ಕಳೊಂದಿಗೆ ಮಾತನಾಡದೇ ಇರುವುದೇ ಎಳೆಯ ಬಾಲಕಿಯರು ತಾಯಿಯಾಗುತ್ತಿರುವುದಕ್ಕೆ, ಬಾಲಕರು ಸಂಘರ್ಷಕ್ಕೆ ಒಳಗಾಗುತ್ತಿರುವುದಕ್ಕೆ ಕಾರಣ.

**–ವಾಸುದೇವ ಶರ್ಮಾ,**
ಕರ್ನಾಟಕ ಮಕ್ಕಳ ಹಕ್ಕು ನಿಗಾ ಕೇಂದ್ರದ ರಾಜ್ಯ ಸಂಯೋಜಕ ಹಾಗೂ ಚೈಲ್ಡ್ ರೈಟ್ಸ್ ಟ್ರಸ್ಟ್ ಮಕ್ಕಳ ಹಕ್ಕುಗಳ ಸಂಸ್ಥೆಯ ಕಾರ್ಯಕಾರಿ ನಿರ್ದೇಶಕ